ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1433
2. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	: ಡಾ॥ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ	: 10.03.2022
4. ಉತ್ತರಿಸುವ ಸಚಿವರು	: ಗೃಹ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರ್ನಾಟಕ ರಾಜ್ಯದಲ್ಲಿ ಅಭಿಯೋಜನಾ ಇಲಾಖೆ ಅಸ್ತಿತ್ವದಲ್ಲಿದೆಯೇ; ಇದ್ದಲ್ಲಿ, ಈ ಇಲಾಖೆಯಡಿ ಕೆಲಸ ನಿರ್ವಹಿಸುತ್ತಿರುವ ಹುದ್ದೆಗಳೆಷ್ಟು;</td><td>ಅಭಿಯೋಜನಾ ಇಲಾಖೆಯಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳ ವಿವರ
<table>
<tr><th rowspan="2">ವೃಂದ</th><th rowspan="2">ಮಂಜೂರಾದ ಹುದ್ದೆಗಳು</th><th colspan="2">ಭರ್ತಿಯಾದ ಹುದ್ದೆಗಳು</th><th rowspan="2">ಖಾಲಿ ಹುದ್ದೆಗಳು</th></tr>
<tr><th>ಖಾಯಂ</th><th>ಗುತ್ತಿಗೆ</th></tr>
<tr><td>ಎ</td><td>344</td><td>230</td><td>17</td><td>68</td></tr>
<tr><td>ನಿಯೋಜನೆ</td><td>57</td><td>29</td><td>0</td><td>28</td></tr>
<tr><td>ಬಿ</td><td>527</td><td>160</td><td>235</td><td>132</td></tr>
<tr><td>ಸಿ</td><td>938</td><td>220</td><td>255</td><td>463</td></tr>
<tr><td>ಡಿ</td><td>475</td><td>31</td><td>360</td><td>444</td></tr>
<tr><td>ಒಟ್ಟು</td><td>2341</td><td>670</td><td>867</td><td>804</td></tr>
</table></td></tr>
<tr><td>ಆ</td><td>ಸರ್ಕಾರದ ಪರ ಅಭಿಯೋಜಕರನ್ನು ನೇಮಿಸುವಲ್ಲಿ ಅನುಸರಿಸುವ ಮಾನದಂಡಗಳೇನು; ಸರ್ಕಾರಿ ದಾವೆಗಳ ಪರ ಕೆಲಸ ನಿರ್ವಹಿಸಲು ಅಭಿಯೋಜಕರನ್ನು ನೇಮಿಸಲು ಇರುವ ಮಾನದಂಡಗಳೇನು;</td><td>

ಸಿಜೆ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುವ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ನ್ಯಾಯಾಲಯಗಳಲ್ಲಿ ಕನಿಷ್ಟ 03 ವರ್ಷಗಳ ಕಾಲ ವಕೀಲಿ ವೃತ್ತಿ ಪೂರೈಸಿದ ಅರ್ಹ ವಕೀಲರುಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಸ್ಪರ್ದಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯು ಲಿಖಿತ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆ (Viva-voce) ಗಳನ್ನು ಒಳಗೊಂಡಿರುತ್ತದೆ.
ಸಿ.ಜೆ.ಎಂ. ಮತ್ತು ಸಿ.ಎಂ.ಎಂ. ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುವ ಹಿರಿಯ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ(ಕಿರಿಯ) ಹುದ್ದೆಗಳನ್ನು ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರಾಗಿ ಕನಿಷ್ಟ 05 ವರ್ಷಗಳ ಕಾಲ ಸೇವೆ ಸಲ್ಲಿಸಿದವರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲಾಗುತ್ತದೆ.
ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸುವ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ(ಹಿರಿಯ) ಹುದ್ದೆಗಳನ್ನು ಹಿರಿಯ ಸರ್ಕಾರಿ ಅಭಿಯೋಜಕರು/ಕಾನೂನು ಅಧಿಕಾರಿ(ಕಿರಿಯ) ಹುದ್ದೆಗಳಲ್ಲಿ ಕನಿಷ್ಟ 05 ವರ್ಷಗಳ ಕಾಲ ಸೇವೆ ಸಲ್ಲಿಸಿದವರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲಾಗುತ್ತದೆ. ಒಂದು ವೇಳೆ 05 ವರ್ಷಗಳ ಪೂರೈಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ ಕನಿಷ್ಟ 03 ವರ್ಷಗಳ ಸೇವೆ ಪೂರೈಸಿದ ಅಧಿಕಾರಿಗಳನ್ನು ಮುಂಬಡ್ತಿಗೆ ಪರಿಗಣಿಸಲಾಗುತ್ತದೆ.
</td></tr>
</table>

ಇ	ಕರ್ನಾಟಕ ರಾಜ್ಯದಲ್ಲಿ ಶಿಕ್ಷೆಗೆ ಗುರಿಯಾಗಿರುವ ಶೇಕಡವಾರು ಪ್ರಮಾಣವೆಷ್ಟು; ಇದು ರಾಷ್ಟ್ರದ ಸರಾಸರಿಗಿಂತ ಎಷ್ಟು ವ್ಯತ್ಯಾಸವಿದೆ; (ಮಾಹಿತಿ ನೀಡುವುದು)	<u>ರಾಜ್ಯದಲ್ಲಿ</u> National Crime Records Bureau ಬಿಡುಗಡೆ ಮಾಡಿರುವ "Crime in India 2020" ವರದಿಯಲ್ಲಿನ ಅಂಶಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 2020ನೇ ಸಾಲಿಗೆ ಸಂಬಂಧಿಸಿದಂತೆ ಶಿಕ್ಷೆ ಪ್ರಮಾಣ ಈ ಕೆಳಕಂಡಂತಿದೆ. 1. ಭಾ.ದ.ಸಂ. ಅಡಿಯಲ್ಲಿನ ಪ್ರಕರಣಗಳು - 51.2 2. ವಿಶೇಷ ಕಾಯ್ದೆಯಡಿಯಲ್ಲಿನ ಪ್ರಕರಣಗಳು - 82.7% <u>ರಾಷ್ಟ್ರಮಟ್ಟದಲ್ಲಿ</u> National Crime Records Bureau ಬಿಡುಗಡೆ ಮಾಡಿರುವ "Crime in India 2020" ವರದಿಯಲ್ಲಿನ ಅಂಶಗಳ ಪ್ರಕಾರ ರಾಷ್ಟ್ರಮಟ್ಟದಲ್ಲಿ 2020ನೇ ಸಾಲಿಗೆ ಸಂಬಂಧಿಸಿದಂತೆ ಶಿಕ್ಷೆ ಪ್ರಮಾಣ ಈ ಕೆಳಕಂಡಂತಿದೆ. 1. ಭಾ.ದ.ಸಂ. ಅಡಿಯಲ್ಲಿನ ಪ್ರಕರಣಗಳು - 59.02% 2. ವಿಶೇಷ ಕಾಯ್ದೆಯಡಿಯಲ್ಲಿನ ಪ್ರಕರಣಗಳು - 87.05%
ಈ	ಸರ್ಕಾರಿ ದಾವೆಗಳಲ್ಲಿ ಸರ್ಕಾರವನ್ನು ಸರಿಯಾಗಿ ಸಮರ್ಥನೆ ಮಾಡಿಕೊಳ್ಳದ ಅಭಿಯೋಜಕರ ವಿರುದ್ಧ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	• ಮಾನ್ಯ ಉಚ್ಚ ನ್ಯಾಯಾಲಯದ ಆದೇಶಾನುಸಾರ ಜಿಲ್ಲೆ, ವಲಯ ಹಾಗೂ ರಾಜ್ಯ ಮಟ್ಟದಲ್ಲಿ ಬಿಡುಗಡೆಯಾದ ಪ್ರಕರಣಗಳ ಪರಾಮರ್ಶೆ ಸಮಿತಿಗಳಿದ್ದು, ಪ್ರತಿ 03 ತಿಂಗಳಿಗೊಮ್ಮೆ ನ್ಯಾಯಾಲಯದಲ್ಲಿ ಬಿಡುಗಡೆಯಾಗುವ ಕ್ರಿಮಿನಲ್ ಪ್ರಕರಣಗಳಲ್ಲಿ ತನಿಖಾಧಿಕಾರಿ ಅಥವಾ ಅಭಿಯೋಜಕರುಗಳ ಲೋಪದೋಷಗಳಿದ್ದಲ್ಲಿ ಅಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ. • ಪ್ರಕರಣದ ಸಾಕ್ಷಿಗಳು ನ್ಯಾಯಾಲಯದ ಮುಂದೆ ಪರಿಣಾಮಕಾರಿಯಾಗಿ ಸಾಕ್ಷ್ಯ ನುಡಿಯುವ ಬಗ್ಗೆ ಅವರಿಗೆ ಅಗತ್ಯ ಮಾಹಿತಿ ಮತ್ತು ಸಹಕಾರವನ್ನು ನೀಡುವ ಬಗ್ಗೆ ಅಭಿಯೋಜನಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. • ಅಭಿಯೋಜಕರು ನ್ಯಾಯಾಲಯದ ಮುಂದೆ ಪರಿಣಾಮಕಾರಿಯಾಗಿ ವಾದ ಮಂಡಿಸಲು / ಅಭಿಯೋಜನಾ ಪ್ರಕರಣ ಮಂಡಿಸಲು ಮಾನ್ಯ ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯಗಳ ತೀರ್ಪುಗಳನ್ನು ಉಲ್ಲೇಖಿಸಿ ಪ್ರಕರಣದ ವಸ್ತು ಸ್ಥಿತಿ ಮತ್ತು ಸನ್ನಿವೇಶಗಳಿಗೆ ಆ ತೀರ್ಪುಗಳನ್ನು ಅಳವಡಿಸಿಕೊಂಡು ವಾದ / ಪ್ರಕರಣಗಳನ್ನು ಮಂಡಿಸಲು ಸೂಚಿಸಲಾಗಿದೆ.

ಒಇ 82 ಪಿಪಿಇ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು